IN THE COURT OF THE SENIOR CIVIL JUDGE, MADIKERI

O.S/117/15

Petitioners : Harshith B.P. and another

-Vs-

Respondent : Barike B.Aiyanna and others

ORDER DATED 17.12.2015

## ಆದೇಶ

ಪ್ರತಿವಾದಿ ಪರ ವಕೀಲರು ಮಧ್ಯಕಾಲೀಕ ಅರ್ಜಿ ಸಂಖ್ಯೆ:೬ನ್ನು ಸಲ್ಲಿಸಿ, ವಾದಿ ಸಲ್ಲಿಸಿರುವ ಮಧ್ಯಕಾಲೀಕ ಅರ್ಜಿ ಸಂಖ್ಯೆ: ೨ನ್ನು ಇತ್ಯರ್ಥಪಡಿಸಬೇಕೆಂದು ಕೋರಿ, ಸದರಿ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

ವಾದಿಗಳು ಅಪ್ರಾಪ್ತ ವಯಸ್ಕರಾಗಿದ್ದು, ಅವರ ಸಂರಕ್ಷಕರಾದ ತಾಯಿಯು ದಾವಾ ಆಸ್ತಿಗಳಲ್ಲಿ ವಾದಿಗಳಿಗೂ ಭಾಗಾಂಶ ಕೋರಿ ಈ ದಾವೆಯನ್ನು ಹೂಡಿರುತ್ತಾರೆ.

ಮಧ್ಯಕಾಲೀಕ ಅರ್ಜಿ ಸಂಖ್ಯೆ: ೨ರಲ್ಲಿ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿರುವ ಮರಗಳನ್ನು ದಾವೆ ಇತ್ಯರ್ಥವಾಗುವವರೆಗೆ ಕಡಿದು ಸಾಗಿಸದಂತೆ ನಿರ್ಬಂಧಕಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

ಪ್ರತಿವಾದಿಗಳು ತಕರಾರು ಸಲ್ಲಿಸಿ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಭಾಗಾಂಶ ಇದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಲು ವಿವರವಾದ ವಿಚಾರಣೆ ಅಗತ್ಯವಿರುತ್ತದೆ. ಈ ಹಂತದಲ್ಲಿ ಈ ವಿವಾದಾಂಶವನ್ನು ತೀರ್ಮಾನಿಸಲು ಬರುವುದಿಲ್ಲ.

ಪ್ರತಿವಾದಿ ಪರ ವಕೀಲರು ೧ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ಹಂಸ ಹಾಜಿ ಎಂಬುವವರು ದಾವಾ ಆಸ್ತಿಗಳಲ್ಲಿರುವ ಮರಗಳನ್ನು ರೂ. ೪ಲಕ್ಷಕ್ಕೆ ಖರೀದಿಸಿದ್ದು, ಸದರಿ ಮರಗಳನ್ನು ಸಾಗಿಸಲು ಅನುಮತಿ ಕೋರಿರುತ್ತಾರೆ. ಈ ದಾವೆ ಸಲ್ಲಿಸುವಾಗ ವಾದ ಪತ್ರದಲ್ಲಿರುವ ಮರಗಳ ಬೆಲೆ ರೂ. ೨೦ ಲಕ್ಷಕ್ಕೂ ಅಧಿಕವಾಗಿರುತ್ತದೆ ಎಂದು ವಾದ ಪತ್ರದಲ್ಲಿ ಹೇಳಲಾಗಿದೆ. ಪ್ರತಿವಾದಿಗಳು ಸದರಿ ಮರಗಳಿಗೆ ಹೇಳಿರುವ ಮೌಲ್ಯಕ್ಕೂ, ವಾದ ಪತ್ರದಲ್ಲಿರುವ ಮೌಲ್ಯಕ್ಕೂ ಅಜಾಗಜಾಂತರ ವ್ಯತ್ಯಾಸವಿರುತ್ತದೆ. ವಾದಿ ಪರ ವಕೀಲರು

ಮಧ್ಯಕಾಲೀಕ ಅರ್ಜಿ ಸಂಖ್ಯೆ: ೭ನ್ನು ಸಲ್ಲಿಸಿ, ದಾವಾ ಆಸ್ತಿಯಲ್ಲಿರುವ ಮರಗಳನ್ನು ತಜ್ಞ ವ್ಯಕ್ತಿಯಿಂದ ಮೌಲ್ಯ ಮಾಡಿಸಲು ನೇಮಿಸಬೇಕೆಂದು ಕೋರಿರುತ್ತಾರೆ. ಆದರೆ ಪ್ರತಿವಾದಿ ಪರ ವಕೀಲರು ಸದರಿ ಅರ್ಜಿಗೆ ತಮ್ಮ ತಕರಾರು ಸಲ್ಲಿಸಲು ಕಾಲಾವಕಾಶ ಕೋರಿರುತ್ತಾರೆ. ವಾದಿ ಪರ ವಕೀಲರು ವಾದ ಮಂಡಿಸುವ ಸಮಯದಲ್ಲಿ ದಾವಾ ಆಸ್ತಿಯಲ್ಲಿರುವ ಮರಗಳ ಮೌಲ್ಯವನ್ನು ಈ ದಾವೆಯ ಅಂತಿಮ

ಆದೇಶಕ್ಕೆ ಒಳಪಟ್ಟು ನ್ಯಾಯಾಲಯದಲ್ಲಿ ಪಾವತಿಸಿದ್ದಲ್ಲಿ ಸದರಿ ಮರಗಳನ್ನು ಸಾಗಿಸಲು ವಾದಿಗಳ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ದಾವಾ ಆಸ್ತಿಯಲ್ಲಿರುವ ಮರಗಳ ಮೌಲ್ಯವನ್ನು ತಜ್ಞ ವ್ಯಕ್ತಿಯಿಂದ ಮಾಪನ ಮಾಡಿಸಬೇಕೆ ಅಥವಾ ವಾದ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿರುವ ಅಂಶಗಳು ಸಾಕಾಗುತ್ತವೆ ಎಂಬುದನ್ನು ಮೊದಲು ನಿರ್ಧರಿಸಬೇಕಾಗುತ್ತವೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ಮಧ್ಯಕಾಲೀಕ ಅರ್ಜಿ ಸಂಖ್ಯೆ:೨ನ್ನು ಪರಿಗಣಿಸುವ ಮೊದಲು ಮಧ್ಯಕಾಲೀಕ ಅರ್ಜಿ ಸಂಖ್ಯೆ:೧ನ್ನು ಪರಿಗಣಿಸಬೇಕಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದು ಮೊಕದ್ದಮೆಯನ್ನು ದಿ:೨.೧.೨೦೧೬ಕ್ಕೆ ಮುಂದೂಡಲಾಗಿದೆ. ಅಲ್ಲಿಯವರೆಗೆ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿರುವ ಮರಗಳನ್ನು ಈ ದಿನ ಯಾವ ರೀತಿ ಇದೆಯೋ ಅದೇ ರೀತಿ ಯಥಾಸ್ಥಿತಿ ಕಾಪಾಡಲು ಆದೇಶಿಸಲಾಗಿದೆ.

sd/xxx

(T.C.Srikanth)
Senior Civil Judge,
Madikeri.